ಅವರನ್ನು ಭೇಟಿ ಮಾಡೋಣ'' ಎಂದ. ಪಾಶಣ್ಣನಿಗೂ ಅದು ಸರಿಯೆನಿಸಿತು.

ಚೌಕ ಎಂದರೆ ಊರಿನ ಪೇಟೆಯ ಪ್ರದೇಶ. ಬಸ್ ಸ್ಟ್ಯಾಂಡ್, ಬ್ಯಾಂಕ್, ಸೊಸೈಟಿ, ಪೋಸ್ಟ್ ಆಫೀಸು, ಅಂಗಡಿ, ಹೋಟೆಲ್ ಎಲ್ಲಾ ಇರುವುದು ಅಲ್ಲೇ. ಬ್ಯಾಂಕ್ ಎದುರುಗಡೆ ರಸ್ತೆಯಲ್ಲಿ ಮುಂದೆ ಹೋದರೆ ಫಾರೆಸ್ಟ್ ಆಫೀಸ್ ಸಿಗುತ್ತಿತ್ತು.

ಮಧ್ಯಾಹ್ನ ಫಾರೆಸ್ಟರ್ ಮನೆಗೆ ಹೋದರೆ ಅವರು ಇರಲಿಲ್ಲ. ಗಾರ್ಡ್ ಮುದ್ದಪ್ಪ ಎದುರಾದ. ''ಏನ್ರೀ ಭಟ್ರೇ. ಯಾರು ಬೇಕಾಗಿತ್ತು?'' ಎಂದು ವಿಚಾರಿಸಿದ. ಪಾಶಣ್ಣ ಫಾರೆಸ್ಟರ್ ಚನ್ನಪ್ಪನನ್ನು ಭೇಟಿ ಮಾಡಲು ಬಂದಿರುವುದಾಗಿ ಹೇಳಿದ. ''ಅವರಿಲ್ಲ, ಸಂಜೆ ಬರುತ್ತಾರೆ, ಹೇಳ್ತೇನೆ. ಅಡಿಕೆ ಗಿಡ್ಕೆ ತಂದಿದೀರಾ?'' ಎಂದ ಮುದ್ದಪ್ಪ.

''ಇಲ್ಲ ಕಣಯ್ಯಾ, ಅವರು ಇದಾರೋ ಇಲ್ಲವೋ ನೋಡ್ಕೊಂಡು ಹೋಗೋಕೆ ಬಂದಿದೀನಿ, ಅಷ್ಟೆ'' ಎಂದ ಪಾಶಣ್ಣ. ಸರ್ಕಾರಿ ನೌಕರರೊಂದಿಗೆ ಅವನು ಹೆಚ್ಚು ವ್ಯವಹಾರ ಇಟ್ಟುಕೊಂಡವನಲ್ಲ.

''ಸರಿ. ಹೀಗೆ ಬರಿ ಕೈ ಬೀಸಿಕೊಂಡು ಬಂದರೆ ಯಾವ ಕೆಲಸವೂ ಆಗಲ್ಲ'' ಎಂದು ಮುದ್ದಪ್ಪ ತಮ್ಮೊಂದಿಗೆ ವ್ಯವಹರಿಸಬೇಕಾದ ಸೂಕ್ಷ್ಮವನ್ನು ತಿಳಿಸಿದ.

ಪಾಶಣ್ಣನಿಗೆ ಒಂದಂತೂ ಗೊತ್ತಾದಂತಾಯಿತು, ಏನಾದರೂ ಕಪ್ಪ ಕಾಣಿಕೆ ಹಿಡ್ಕೊಂಡು ಬರಬೇಕು. ಸಂಜೆ ಬರುವಾಗ ಫಾರೆಸ್ಟರ್ ಕಾಣಲು ಎಲ್ಲ ಸಿದ್ಧತೆ ಮಾಡಿಕೊಂಡೇ ಹೊರಟ.

ಸಂಜೆ ಫಾರೆಸ್ಟರ್ ಚನ್ನಪ್ಪ ಮನೆಯಲ್ಲೇ ಇದ್ದರು. ''ಬರ್ರೀ ಭಟ್ರೇ ಏನಾಗಬೇಕಿತ್ತು?'' ಅವರಿಗೆ ಪಾಶಣ್ಣ ಕೊಂಚ ಹಳೆಯ ಪರಿಚಯ.

''ಅಲ್ಲಾ ಸಾರ್, ನಿಮ್ಮ ಹಂದಿಗಳು ನಮ್ಮ ಅಡಿಕೆ ಸಸಿ ಎಲ್ಲಾ ತಿಂದುಬಿಟ್ಟಿವೆ'' ಎಂದು ಅಡಿಕೆ ಸಸಿಗಳನ್ನು ಕಳೆದುಕೊಂಡ ದುಃಖದಲ್ಲಿರುವ ಪಾಶಣ್ಣ ದೂರಿದ.

''ನಮ್ಮ ಹಂದಿಗಳು ಎನ್ನಬೇಡ್ರೀ. ಅವು ಕಾಡಿನಲ್ಲಿ ಇರೋವು. ನಮ್ದೂ ಅಲ್ಲ, ನಿಮ್ದೂ ಅಲ್ಲ. ಅಥವಾ ನಿಮ್ದೂ ಹೌದು, ನಮ್ದೂ ಹೌದು. ಅವ್ಕೂ ಹೊಟ್ಟೆ ಇದೆ. ನಾಲ್ಕು ಅಡಿಕೆ ಸಸಿ ತಿಂದಿರಬಹುದು, ಏನು ತಪ್ಪು? ಅಡಿಕೆ ಸಸಿ ತಿಂದಿದಾವೆ ಹೊರತು ಅಡಿಕೆ ಮರ ತಿಂದಿದಾವಾ? ಬೇಲಿ ಸರಿ ಮಾಡಿಕೊಳ್ಳಬೇಕ್ರೀ'' ಫಾರೆಸ್ಟರ ಗಡುಸಾಗಿ ಮಾತಾಡುತ್ತಿದ್ದಂತೆ ಪಾಶಣ್ಣನಿಗೆ ಬೆವರಿಳಿಯತೊಡಗಿತು.

''ಅಲ್ಲಾ ಸಾರ್, ನಮ್ಮ ತೋಟದಲ್ಲಿ ಎರಡು ಕಡೆ ಧರೆಗಟ್ಟು ಇದೆ. ಮತ್ತೊಂದು ಕಡೆ ಚಪ್ಪಡಿ ಕಂಬಗಳ ಬೇಲಿ ಇದೆ. ಅವು ಹ್ಯಾಗೆ ಬರ್ತಾವೋ ಗೊತ್ತಾಗುವುದಿಲ್ಲ. ರಾತ್ರಿ ಬಂದು ಬಿಡ್ತಾವೆ'' ಪಾಶಣ್ಣ ಹೇಳಿದ್ದಕ್ಕೆ, ''ಅಲ್ಲಾ ನೀವು ರಾತ್ರಿ ಮನೇಲಿ ಏನು ಮಾಡ್ತೀರಿ. ಅಲ್ಲಿ ಆ ಕೆರೆಮಕ್ಕಿ ಊರಲ್ಲಿ ನೋಡಿ. ದೀವರು ಹೇಗೆ ಗದ್ದೆ ಮಾಡ್ತಾರೆ ಅಂತ. ರಾತ್ರಿಯೆಲ್ಲಾ ಹಕ್ಕೆ ಹಾಕಿಕೊಂಡು ಗದ್ದೆಯಲ್ಲೇ ಮಲಗುತ್ತಾರೆ, ನೀವು ಹಾಗೆ ಕಾಯ್ಬೇಕಪ್ಪಾ.'' ಎಂದ ಫಾರೆಸ್ಟರ್ ಚನ್ನಪ್ಪ ನೀವೆಲ್ಲ ಕೃಷಿ ಮಾಡಲು ನಾಲಾಯಕ್ ಎನ್ನುವ ಧ್ವನಿಯಲ್ಲಿ ಹೇಳಿದ.

ಚನ್ನಪ್ಪನ ಮಾತುಗಳಿಗೆ ಪಾಶಣ್ಣನಿಗೆ ಸಿಟ್ಟು ಬಂತು. ಆದರೆ, ತೋರಿಸಿಕೊಳ್ಳುವಂತಿಲ್ಲ. ತಡೆದುಕೊಂಡು ಹೇಳಿದ, ''ನಿಮ್ಮ ಹತ್ತಿರ ಹೇಳೋದು ಹೇಳಿದ್ದೇನೆ. ಇನ್ನು ಯಾರಾದರೂ ಕೋವಿ ಇದ್ದೋರಿಗೆ ಹೇಳಿ ಹೊಡೆಸಬೇಕು ಅಷ್ಟೆ''.

''ಏ, ಹಾಗೆಲ್ಲಾ ಮಾಡಿದರೆ ಕೇಸ್ ಹಾಕ್ಬೇಕಾಗುತ್ತದೆ. ಕೊನೆಗೆ ನೀವು ಜೈಲಿಗೆ ಹೋಗ್ಬೇಕಾಗುತ್ತೆ. ಅಲ್ಲಾ, ನೀವು ಐಬೆಕ್ಸ್ ಬೇಲಿ ಮಾಡಬಹುದಲ್ಲಾ? ನಮ್ಮ ಶಡ್ಡಕ ಒಬ್ಬ ಐಬೆಕ್ಸ್ ಏಜೆನ್ಸಿ ಮಾಡುತ್ತಾನೆ; ಚೀಪಾಗಿ ಮಾಡ್ಸಿಕೊಡೋಣ.'' ಎಂದ ಫಾರೆಸ್ಟರ್ ಚನ್ನಪ್ಪ. ಅವನು ಎಲ್ಲಾ ನಮ್ಮದೇ ತಪ್ಪು ಎನ್ನುವಂತೆ ಮಾತಾಡುತ್ತಾನೆ. ಮಾತ್ರವಲ್ಲ, ಐಬೆಕ್ಸ್ ಏಜೆನ್ಸಿಯ ಬ್ರೋಕರ್‌ನಂತೆ ಮಾತನಾಡುತ್ತಿರುವುದು ಪಾಶಣ್ಣನ ಗಮನಕ್ಕೆ ಬಂತು.